# ಮನಾಲಿಯ ಹಿಮಸ್ವರ್ಗದಲ್ಲಿ ನಲಿದಾಟ

**ಮನಾಲಿಯ ಹಿಮದಲ್ಲಿ ನಲಿದಾಡಬೇಕು ಎಂಬ ನನ್ನ ಬಯಕೆ ಕೊನೆಗೂ ಈಡೇರಿದ್ದು ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗಿತ್ತು. ಆ ಸಂಭ್ರಮದ ಸವಿನೆನಪನ್ನು ಹಂಚಿಕೊಳ್ಳುವುದು ಇನ್ನೊಂದು ಸಂಭ್ರಮ...!**

■ ಶೋಭಾ ಪುರೋಹಿತ್



ಚಿಕ್ಕ ವಯಸ್ಸಿನಿಂದಲೂ ನನಗೆ ಹಿಮದಲ್ಲಿ ಆಡಬೇಕೆನ್ನುವ ಹುಚ್ಚು ಹಂಬಲ. ಸಿನಿಮಾ ಗಳಲ್ಲಿ ನಾಯಕ, ನಾಯಕಿಯರು ಹಿಮದಲ್ಲಿ ಆಡುವಾಗ, ಪ್ರೇಮಗೀತೆ ಹಾಡುವಾಗ, ಸ್ಕೀಯಿಂಗ್ ಈ ಥರದ ದೃಶ್ಯಗಳನ್ನು ಕಂಡಾಗಲೆಲ್ಲಾ ಒಂದು ಸಲವಾದರೂ ಹಿಮಾಲಯವನ್ನು ನೋಡಲೇಬೇಕೆಂಬ ನನ್ನ ಬಯಕೆ ಉತ್ಕಟವಾಗಿತ್ತು. ಒಂದು ಸಲ ನನ್ನನ್ನು ಹಿಮಾಲಯಕ್ಕೆ ಕರೆದೊಯ್ಯು ವಂತೆ, ನನ್ನ ಮಗನಿಗೆ ಹೇಳುತ್ತಲೇ ಇದ್ದೆ. ಹಿಮ ನೋಡದೇ ಹಾಗೇ ಸತ್ತರೆ ಭೂತವಾಗಿ, ಹಿಮದಲ್ಲಿ ಅಲೆಯುತ್ತೇನೆ ಎಂದು ಹೇಳುತ್ತಿದ್ದೆ. ತಮಾಷೆಗಾಗಿ ಹಾಗೆ ಹೇಳಿದರೂ, ನನಗೆ ನಿಜವಾಗಿಯೂ ಹಾಗೇ ಅನಿಸುತ್ತಿತ್ತು.

ಕೊನೆಗೊಮ್ಮೆ ನನ್ನ ಆಸೆ ಕೈಗೂಡುವ ಸಮಯ ಒದಗಿ ಬಂತು. ಮಾರ್ಚ್ 2019 ರಲ್ಲಿ ಹಿಮಾಚಲ ಪ್ರದೇಶದ ಮನಾಲಿಗೆ ಭೇಟಿ ಕೊಟ್ಟೆವು. ನಮ್ಮ ಟ್ಯಾಕ್ಸಿ ಮನಾಲಿಗೆ ಹತ್ತಿರವಾದಂತೆ, ರಸ್ತೆಯ ಇಕ್ಕೆಲಗಳಲ್ಲಿ ಉದುರಿದ ಹಿಮದ ರಾಶಿ ಕಂಡು, ಮೈಪುಕಗೊಂಡಿತು. ನಾವು ಉಳಿದುಕೊಂಡ ಪ್ರವಾಸಿಮಂದಿರದ ಸುತ್ತಲೂ ಹಿಮ, ಅರಳೆಯಂತೆ ಹಾಸಿತ್ತು. ಆಚೆ ಬಂದರೆ,ಹಿಮ ಹೊದ್ದ ಬೆಟ್ಟಗಳ ಸಾಲು.ಕಣ್ಣು ಚಾಚಿದಲ್ಲೆಲ್ಲ ಹಿಮವೇ. ನಾನು ಹಿಮಾಲಯದ ತಪ್ಪಲಲ್ಲಿದ್ದೇನೆ ಅಂತ ನಂಬಲೂ ಆಗದಷ್ಟು, ಮನ ಮಂತ್ರಮುಗ್ಧವಾಗಿತ್ತು.

ಹಿಮದ ಚಾರಣಕ್ಕಾಗಿ ನಾವು, ಶೋಲಾಂಗ್ ವ್ಯಾಲಿಗೆ ಹೊರಟೆವು. ಹಿಮದಲ್ಲಿ ಆಡಲು ಅನುಕೂಲವಾಗುವಂಥ ಸೂಟು,ಬೂಟು ಬಾಡಿಗೆಗೆ ಪಡೆದು ಧರಿಸಿದೆವು. ಹಿಮಾಲಯದ ಬುಡಕ್ಕೆ ಬಂದಾಗ ತೇನ್ಸಿಂಗ್ ಮೌಂಟ್ ಎವರೆಸ್ಟ್ ಏರಿದಂಥ ಭಾವ.ಬಾಗಿ ನಮಿಸಿ,ಮುಂದೆ ಸಾಗಿದೆ.ಎಲ್ಲೆಲ್ಲೂ ಬೆಣ್ಣೆಯಂಥ ಹಿಮದ ರಾಶಿ. ಜನರು ಓಡಾಡಿದ ಕಡೆ ಹಿಮ ಪುಡಿಯಾಗಿರುತ್ತದೆ. ಇಲ್ಲದಿದ್ದರೆ ಜಾರುತ್ತದೆ. ಹೀಗೇ ಅಂದಾಜಿಸಿ ಹೋಗುವಾಗ, ಹಿಮದ ರಾಶಿಯಲ್ಲಿ ಕಾಲು ಹೂತು,ಜಾರಿದೆ. ಮೇಲೇಳದೇ ಹಾಗೇ ಒರಗಿದೆ. ಕೈತುಂಬಾ ಹಿಮ ಎತ್ತಿ, ಮೈಮೇಲೆಲ್ಲಾ ಸುರಿದುಕೊಂಡೆ. ಚಿಕ್ಕ ಮಗುವಿನಂತೆ ಸಂಭ್ರಮಿಸಿದೆ.

ಅಷ್ಟರಲ್ಲಿ ಸ್ಕೂಟರಿನಂಥ ವಾಹನದಲ್ಲಿ ಜನ ಮೇಲೆ ಹೋಗುವುದನ್ನು ನೋಡಿ, ನಾವೂ ಮೇಲೆ ಹೋದೆವು. ಎತ್ತರದಲ್ಲಿ ಏರಿ, ಇಳಿಜಾರಿನಲ್ಲಿ ಜಾರಿ ಗಾಡಿ ಹೋಗುತ್ತಿದ್ದರೆ, ಭಯವಾದರೂ ಏನೋ ಪುಳಕ. ಅಂತೂ ಮೇಲೇರಿ ಹೋಗಿದ್ದು ಸಾರ್ಥಕ ಅನಿಸಿತು. ಅಲ್ಲಿ ಹಿಮ ಇನ್ನೂ ಒತ್ತೊತ್ತಾಗಿತ್ತು. ಅಲ್ಲದೆ ಸ್ಕೀಯಿಂಗ್, ಪ್ಯಾರಾ ಗ್ಲೈಡಿಂಗ್ ಇತ್ಯಾದಿ ಆಟಗಳನ್ನೂ ಆಡ್ತಾ ಇದ್ದರು.ಪುನಃ ಅಲ್ಲಿ ಹಿಮದಲ್ಲಿ ಬಿದ್ದು, ಎದ್ದು ಹೊರಳಾಡಿ ತೃಪ್ತಿಪಟ್ಟೆವು. ಅಷ್ಟರಲ್ಲಿ ಜನ ರೋಪ್ ವೇನಲ್ಲಿ ಹೋಗುವುದು ನೋಡಿ, ನಾವೂ ಹೊರಟೆವು. ಮೇಲಕ್ಕೆ ಹೋದಂತೆಲ್ಲಾ, ಸುತ್ತಲೂ ಹಿಮದ ಬೆಟ್ಟಗಳಲ್ಲದೆ ಬೇರೇನೂ ಇಲ್ಲ. ಬೇರೆ ಯಾವುದೋ ಲೋಕಕ್ಕೆ ಹೋದಂಥ ಅನುಭವ!

ಸ್ವರ್ಗವೆಂಬುದು ಇನ್ನೆಲ್ಲಿಯೂ ಇಲ್ಲ, ಇದೇ ಭೂಲೋಕದ ಸ್ವರ್ಗ ಅನ್ನಿಸಿ ಮನಸ್ಸು ಮುದಗೊಂಡಿತು. ಅಲ್ಲಿ ಸ್ವಲ್ಪ ಹೊತ್ತು ಕಾಲ ಕಳೆದು ಪುನಃ ರೋಪ್‌ವೇ ಮೂಲಕ ಕೆಳಗಿಳಿದು ಬಂದೆವು. ಸುತ್ತಲೂ ಹಿಮಾಚ್ಛಾದಿತ, ಧವಳಗಿರಿಯನ್ನು ಕಣ್ತುಂಬಿಕೊಳ್ಳುವಾಗ,ಒಂದು ಪಕ್ಷ ಇಲ್ಲಿಂದ ಬಿದ್ದು ಬಿಟ್ಟರೆ ಅನಿಸಿ ಭಯವಾಯಿತು. ಕೆಳಗಿಳಿದು ಬಂದು ಮತ್ತೆ ಒಂದಷ್ಟು ಹೊತ್ತು ಹಿಮದಲ್ಲಿ ಆಡಿ, ಒಬ್ಬರ ಮೇಲೊಬ್ಬರು ಹಿಮ ಎರಚಿ ಸಂಭ್ರಮಿಸಿದೆವು.

ಎರಡೆರಡು ಸ್ವೆಟರ್, ವಾಟರ್ ಪ್ರೂಫ್ ಸೂಟ್, ಟೊಪ್ಪಿಗೆ, ಕೈಗೆ ಗ್ಲೌಸ್ ಇಷ್ಟೆಲ್ಲಾ ಹಾಕಿದ್ದರಿಂದ ನೆನೆದುಕೊಳ್ಳುವ ಭಯವಿರಲಿಲ್ಲ. ಅಲ್ಲಿರುವ ಹೋಟೆಲಿನಲ್ಲಿ ಬಿಸಿ ಚಹಾ ಹೀರಿದೆವು. ಆ ತಂಪು ವಾತಾವರಣಕ್ಕೆ ಬಿಸಿ ಚಹಾ ಆಹ್! ಅನುಭವಿಸಿಯೇ ತಿಳಿಯಬೇಕು. ಅಲ್ಲಿಂದ ಹೊರಡಲು ಮನಸ್ಸೇ ಇರಲಿಲ್ಲ. ನಮ್ಮನ್ನು ಕರೆ ತಂದಿದ್ದ ಸ್ಕೂಟರ್‌ನವನು ಅವಸರಿಸಿದ್ದರಿಂದ ಹೊರಟೆವು. ಕೆಳಗೆ ಇಳಿಯು ವಾಗ ಒಂದೊಂದು ಕಡೆ ಇಳಿಜಾರಿನಲ್ಲಿ, ತಲೆ ಕೆಳಗಾದಂತೆ ಭಾಸವಾಗುತ್ತಿತ್ತು. ಅಂತೂ ಕೆಳಗೆ ಬಂದು ಸೇರಿದಾಗ ಇನ್ನೂ ಸ್ವಲ್ಪ ಹೊತ್ತು ಆಡುವ ಉತ್ಸಾಹ ಇದ್ದರೂ, ಮೇಲಿನಿಂದ ಹಿಮಪಾತ ಶುರುವಾಯಿತು. ಇನ್ನೆರಡು ಗಂಟೆ ಕಳೆದರೆ ಕೆಳಗೆಲ್ಲಾ ಹಿಮಪಾತ ಆಗುತ್ತದೆ ಅಂತ ಅಲ್ಲಿನವರು ಎಚ್ಚರಿಸಿದಾಗ, ವಿಧಿ ಇಲ್ಲದೇ ಕಾರು ಹತ್ತಿ ಹೊರಟೆವು.

ಇಷ್ಟಾದರೂ ಹಿಮಾಲಯ ಸಂದರ್ಶಿಸಲು ಅವಕಾಶ ಸಿಕ್ಕಿದ್ದಕ್ಕಾಗಿ, ಕರೆದೊಯ್ದ ನನ್ನ ಮಗನ ಬಗ್ಗೆ, ಮನದಲ್ಲಿ ಹೆಮ್ಮೆಪಡುತ್ತಾ, ಊರಿಗೆ ವಾಪಸಾದೆವು. ■